ಓ ಎಸ್ ನಂಃ 754-14
ಡಿ ಡಬ್ಲ್ಯೂ ಃ 1

**ದಿಃ 27-09-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ ಎನ್ ಡಿ ವಕೀಲರಿಂದ**

24. ಸರ್ವೆ ನಂ 69 ನ್ನು ಸರ್ವೆ ನಂ 69/1, 69/2 ಮತ್ತು 69/3 ಪ್ರತ್ಯೇಕ ಆಸ್ತಿಗಳಾಗಿರುತ್ತವೆ ಎಂದರೆ ಅವೆಲ್ಲವೂ ಸರ್ವೆ ನಂ 69 ರಲ್ಲಿ ಬರುತ್ತಿದ್ದು ಒಂದಕ್ಕೊಂದು ಹೊಂದಿಕೊಂಡಿರುತ್ತವೆ. ಸರ್ವೆ ನಂ 69/1, 69/2 ಮತ್ತು 69/3 ಪ್ರತ್ಯೇಕ ಸರ್ವೆ ನಂಬರುಗಳು ಆಗಿರುವುದಿಲ್ಲ. ಸರ್ವೆ ನಂ 69/1, 69/2 ಮತ್ತು 69/3 ಪೋಡಿಯಾಗಿರುತ್ತವೆ. ಸರ್ವೆ ನಂ 69/3, ಸರ್ವೆ ನಂ 69/2 ರ ಪೂರ್ವ ದಿಕ್ಕಿಗೆ ಬರುತ್ತದೆ. ಸರ್ವೆ ನಂ 69/2 ನಮಗೆ ಪಾಪಣ್ಣರವರ ಕಡೆಯಿಂದ ಕ್ರಯಕ್ಕೆ ಬಂದಿರುತ್ತದೆ. ಸರ್ವೆ ನಂ 69/2 ಪಾಪಣ್ಣರವರಿಗೆ ನರಸಿಂಹಯ್ಯರವರಿಂದ ಬಂದಿದ್ದು ನರಸಿಂಹಯ್ಯರವರಿಗೆ ವಾದಿಯ ತಂದೆಯಾದ ರಾಮಾಂಜನಯ್ಯರವರ ಕಡೆಯಿಂದ ಬಂದಿರುತ್ತದೆ. ಸರ್ವೆ ನಂ 69/2 ನ್ನು ಯಲ್ಲಮ್ಮರವರು ಖರೀದಿ ಮಾಡಿರುತ್ತಾರೆ. ಯಲ್ಲಮ್ಮರವರು ಸದರಿ ಸರ್ವೆ ನಂಬರಿನಲ್ಲಿ 1 ಎಕರೆ 20 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ. 1 ಎಕರೆ 20 ಗುಂಟೆ ಜಮೀನನ್ನು ಹೊರತುಪಡಿಸಿ ಆ ಸರ್ವೆ ನಂಬರಿನಲ್ಲಿ 7 ಗುಂಟೆ ಖರಾಬು ಜಮೀನು ಇರುತ್ತದೆ. ನಮಗೆ ಖರಾಬು ಜಮೀನನ್ನು ಸೇರಿಸಿ 1 ಎಕರೆ 27 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ. 7 ಗುಂಟೆ ಜಮೀನು ಖರಾಬು ಆದ್ದರಿಂದ ಅದನ್ನು ನೊಂದಣಿ ಮಾಡಿಸಲು ಬರುವುದಿಲ್ಲ ಎಂದರೆ ನಿಜ. 1 ಎಕರೆ 20 ಗುಂಟೆ ಜಮೀನನ್ನು ಮಾತ್ರ ನೊಂದಾಯಿಸಬಹುದು ಎಂದರೆ ನಿಜ. ನಾನು 1 ಎಕರೆ 20 ಗುಂಟೆ ಹೈನು ಜಮೀನಿಗೆ ಮಾತ್ರ ಮಾಲೀಕ ಎಂದರೆ ನಾನು 1 ಎಕರೆ 20 ಗುಂಟೆ ಮತ್ತು 7 ಗುಂಟೆ ಖರಾಬು ಜಮೀನನ್ನು ಖರೀದಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. 7 ಗುಂಟೆ ಜಮೀನು ಖರಾಬು ಇದಿದ್ದರಿಂದ ಅದನ್ನು ವರ್ಗಾವಣೆ ಮಾಡಲು ಬರುವುದಿಲ್ಲ ಆದ ಕಾರಣ ನಾನು 1 ಎಕರೆ 20 ಗುಂಟೆ ಜಮೀನಿಗೆ ಮಾತ್ರ ಮಾಲೀಕ ಎಂದರೆ ಸರಿಯಲ್ಲ. 7 ಗುಂಟೆ ಖರಾಬು ಜಮೀನು ಸರ್ವೆ ನಂ 69/2 ಮತ್ತು 69/3 ರ ಪಶ್ಚಿಮ ದಿಕ್ಕಿಗೆ ಬರುತ್ತದೆ. ಸರ್ವೆ ನಂ 69/3 ರ ಪೂರ್ವಕ್ಕೆ ರಂಗಪ್ಪ ಮತ್ತು ಆಂಜನಪ್ಪರವರ ಜಮೀನು ಬರುತ್ತದೆ. ಸರ್ವೆ ನಂ 69/3 ರ ಪೂರ್ವಕ್ಕೆ ರಂಗಪ್ಪರವರ ಜಮೀನು ಮಾತ್ರ ಬರುತ್ತದೆ ಎಂದರೆ ರಂಗಪ್ಪ ಹಾಗೂ ಆಂಜನಪ್ಪರವರ ಜಮೀನು ಬರುತ್ತದೆ ಎಂದು ಹೇಳುತ್ತಾರೆ. ನಮ್ಮ ಕ್ರಯಪತ್ರಗಳಲ್ಲಿ ಸರ್ವೆ ನಂ 69/2 ರ ಪೂರ್ವಕ್ಕೆ 69/3 ಎನ್ನುವ ಬದಲು ರಂಗಪ್ಪ ರವರ ಜಮೀನು ಎಂದು ತಪ್ಪಾಗಿ ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ರಂಗಪ್ಪರವರ ಹೆಸರು ನಮ್ಮ ಕ್ರಯಪತ್ರಗಳಲ್ಲಿ

ತಪ್ಪಾಗಿ ನಮೂದು ಆಗಿದ್ದರಿಂದ ಸರ್ವೆ ನಂ 69/3 ರ ಜಮೀನು ನನ್ನದೇ ಜಮೀನು ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸರ್ವೆ ನಂ 69/3 ಸರ್ವೆ ನಂ 69/2 ರಲ್ಲಿ ಬರುತ್ತದೆ. ಸರ್ವೆ ನಂ 69/3 ಸರ್ವೆ ನಂ 69/2 ರಲ್ಲಿ ಸೇರಿಕೊಂಡಿದೆ ಎಂದು ತೋರಿಸಲು ಕ್ರಯಪತ್ರವನ್ನು ಕೊಟ್ಟಿರುತ್ತೇನೆ. ಸಾಕ್ಷಿಗೆ ಈಗ ನಿಡಿ 6 ನ್ನು ತೋರಿಸಲಾಗಿ ಆ ಕ್ರಯಪತ್ರದಲ್ಲಿ ಸರ್ವೆ ನಂ 69/3 ಸರ್ವೆ ನಂ 69/2 ರಲ್ಲಿ ಬರುತ್ತದೆ ಎಂದು ಬರೆಯಲಾಗಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ನಿಡಿ 3 ರಿಂದ 5 ನ್ನು ತೋರಿಸಲಾಗಿ ಅದರಲ್ಲಿ ಸರ್ವೆ ನಂ 69/3 ಸರ್ವೆ ನಂ 69/2 ರಲ್ಲಿ ಸೇರಿಕೊಂಡಿದೆಯಾ ಎಂಬುದನ್ನು ನೋಡಿ ಹೇಳಿ ಎಂದರೆ ನನಗೆ ಸರಿಯಾಗಿ ಕಣ್ಣು ಕಾಣುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ತಾವು ಹಾಜರುಪಡಿಸಿದ ನಿಪಿ 31 ರಿಂದ 45 ತೋರಿಸಲಾಗಿ ಅದರಲ್ಲಿ ಸರ್ವೆ ನಂ 69/3 ಸರ್ವೆ ನಂ 69/2 ರಲ್ಲಿ ಸೇರಿಕೊಂಡಿದೆಯಾ ಎಂಬುದನ್ನು ಹೇಳಬಹುದಾ ಎಂದರೆ ಸರ್ವೆ ನಂ 69/3 ಮತ್ತು ಸರ್ವೆ ನಂ 69/2 ಆಸ್ತಿಗಳು ಕಾಣುತ್ತಿಲ್ಲ ಎಂದು ಹೇಳುತ್ತಾರೆ.

25. ಈ ದಾವೆಯನ್ನು ಹೂಡುವಾಗ ಸರ್ವೆ ನಂ 69/3 ರ ಸುತ್ತಲೂ ಕಲ್ಲುಗುಚ್ಚ ಇತ್ತು ಎಂದರೆ ಸರಿಯಲ್ಲ. ಸರ್ವೆ ನಂ 69/3 ರ ಪೂರ್ವ ಪಶ್ಚಿಮ ವಿಸ್ತೀರ್ಣ 130 ಅಡಿ ಮತ್ತು ಉತ್ತರ ದಕ್ಷಿಣದ ವಿಸ್ತೀರ್ಣ 165 ಅಡಿ ಎಂದರೆ ನಿಜ. ಸಾಕ್ಷಿ ಮುಂದುವರೆದು ನಾನು ಖರೀದಿ ಮಾಡಿದ ಆಸ್ತಿ ಸಹ ಇದರಲ್ಲಿಯೇ ಬರುತ್ತದೆ ಎಂದು ಹೇಳುತ್ತಾರೆ. ಸರ್ವೆ ನಂ 69/3 ರ ವಿಸ್ತೀರ್ಣ ಗುಂಟೆ ಲೆಕ್ಕದಲ್ಲಿ 20 ಗುಂಟೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಅದು ನಾನು ಖರೀದಿ ಮಾಡಿದ ಆಸ್ತಿಯಲ್ಲಿ ಬರುತ್ತದೆ ಎಂದು ಹೇಳುತ್ತಾರೆ.

26. ಸರ್ವೆ ನಂ 69/3 ರ ಮೇಲೆ ವಾದಿ ಸಾಲ ಪಡೆದಿರುತ್ತಾರೆ ಎಂದರೆ ಆ ಆಸ್ತಿ ನಾನು ಖರೀದಿ ಮಾಡಿದ ಆಸ್ತಿಯಲ್ಲಿ ಬರುತ್ತಿದ್ದು ವಾದಿ ಸೃಷ್ಟಿ ಮಾಡಿ ಸಾಲ ಪಡೆದಿರುತ್ತಾರೆ ಎಂದು ಹೇಳುತ್ತಾರೆ. ಸರ್ವೆ ನಂ 69/2 ರ ವಿಸ್ತೀರ್ಣ 1 ಎಕರೆ 20 ಗುಂಟೆ ಮತ್ತು 7 ಗುಂಟೆ ಖರಾಬು ಜಮೀನು ಮತ್ತು ಸರ್ವೆ ನಂ 69/3 ರ ವಿಸ್ತೀರ್ಣ 20 ಗುಂಟೆ ಎಂದರೆ ಸರಿಯಲ್ಲ. ಸರ್ವೆ ನಂ 69/3 ಸರ್ವೆ ನಂ 69/2 ರಲ್ಲಿ ಸೇರಿಕೊಂಡಿದೆ ಎಂದು ನಾನು ದಾವೆಯನ್ನು ಹೂಡಿರುವುದಿಲ್ಲ. ಸರ್ವೆ ನಂ 69/3 ರ ಯಾವ ದಿಕ್ಕಿಗೆ ಶೆಡ್ ಬರುತ್ತದೆ ಎಂದರೆ ಅದು ನಮ್ಮ ಆಸ್ತಿಯ ಪೂರ್ವಕ್ಕೆ ಬರುತ್ತದೆ ಎಂದು ಹೇಳುತ್ತಾರೆ. ಆ ಶೆಡ್ಡಿನ ವಿಸ್ತೀರ್ಣ 15*25 ಅಡಿ ಇರುತ್ತದೆ ಎಂದರೆ ನಿಜ. ಈ ಶೆಡ್ಡಿಗೆ ನಾನು ವಿದ್ಯುಚ್ಚಕ್ತಿ ಸಂಪರ್ಕ ಪಡೆದಿರುತ್ತೇನೆ ಎಂದರೆ ಅದಕ್ಕೆ ವಿದ್ಯುಚ್ಚಕ್ತಿ ಸಂಪರ್ಕ ಇರುವುದಿಲ್ಲ ಎಂದು ಹೇಳುತ್ತಾರೆ. ಆ ಶೆಡ್ಡಿಗೆ ವಿದ್ಯುಚ್ಚಕ್ತಿ ಸಂಪರ್ಕ ಇದ್ದು ಅಈಗ ಅದನ್ನು ಡಿಸ್ ಕನೆಕ್ಟ್ ಆಗಿರುತ್ತದೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ಹಾಜರು ಆದಾಗಿನಿಂದ ಈ ದಾವೆಯಲ್ಲಿ ಏನೇನು ನಡೆಯುತ್ತಿದೆ ನನಗೆ ಗೊತ್ತಿದೆ. ಈ ದಾವೆಯಲ್ಲಿ ಯಥಾಸ್ಥಿತಿಯನ್ನು ಕಾಪಾಡುವುದು ಎಂದು ಆದೇಶ ಆಗಿರುವುದು ನನಗೆ ಗೊತ್ತಿಲ್ಲ. ಈ ವಿಷಯವನ್ನು ನಮ್ಮ ವಕೀಲರು

ನನಗೆ ಹೇಳಿರುವುದಿಲ್ಲ. ಶೆಡ್ಡನ್ನು 2005 ರಲ್ಲಿ ನಾನು ಆಸ್ತಿಯನ್ನು ಕೊಂಡುಕೊಂಡಾಗ ಕಟ್ಟಿರುತ್ತೇನೆ. ಈ ದಾವೆ ಚಾಲ್ತಿಯಲ್ಲಿರುವಾಗ ವಾದಿ ನನ್ನ ವಿರುದ್ದ ದೂರನ್ನು ದಾಖಲು ಮಾಡಿದ್ದರು ಎಂದರೆ ನಿಜ, ಆದರೆ ಅದು ಸುಳ್ಳು ಇರುತ್ತದೆ.

27. ಶೆಡ್ಡು ಸರ್ವೆ ನಂ 69/3 ರಲ್ಲಿ ಬರುವುದಿಲ್ಲ ನನ್ನ ಜಮೀನಿನ ಚಕ್ಕುಬಂದಿ ಒಳಗೆ ಬರುತ್ತದೆ. ಈ ಶೆಡ್ಡನ್ನು ನಾವು ಸರ್ವೆ ನಂ 69/3 ರ ಪಶ್ಚಿಮಕ್ಕೆ ದಿನಾಂಕಃ 06-09-2010 ರಂದು ರಾತ್ರೋರಾತ್ರಿ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ಶೆಡ್ಡನ್ನು ಕಟ್ಟಿರುವ ಬಗ್ಗೆ ಸಾಕ್ಷನ್ ಪ್ಲಾನ್ ಇರುವುದಿಲ್ಲ. ಸಾಕ್ಷಿ ಮುಂದುವರೆದು ಅದು ತಾತ್ಕಾಲಿಕ ಶೆಡ್ಡು ಆಗಿರುತ್ತದೆ ಎಂದು ಹೇಳುತ್ತಾರೆ. ಈ ಶೆಡ್ಡನ್ನು ನಾನು ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿ ಸರ್ವೆ ನಂ 69/3 ರ ಪಶ್ಚಿಮಕ್ಕೆ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಸರ್ವೆ ನಂ 69/2 ರ 1 ಎಕರೆ 20 ಗುಂಟೆ ಜಮೀನಿಗೆ ಮಾತ್ರ ಮಾಲೀಕ ಎಂದರೆ ಸರಿಯಲ್ಲ. ನನ್ನ ಪ್ರಕಾರ ನಾನು 1 ಎಕರೆ 20 ಗುಂಟೆ ಜಮೀನಿಗೆ ಮಾಲೀಕನಾಗಿರುತ್ತೇನೆ. ಸರ್ವೆ ನಂ 69/3 ಸರ್ವೇ ನಂ 69/2 ರಲ್ಲಿ ಸೇರಿಕೊಂಡಿಲ್ಲ ಅವೆರಡು ಪ್ರತ್ಯೇಕ ಆಸ್ತಿಗಳು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಹೂಡುವಾಗ ಸರ್ವೆ ನಂ 69/3 ರಲ್ಲಿ ಮೇಲೆ ಹೇಳಿದ ಶೆಡ್ ಇರಲಿಲ್ಲ ಎಂದರೆ ಸರಿಯಲ್ಲ.

28. ನಾನು ನನ್ನ ರಾಜಕೀಯ ಪ್ರಭಾವವನ್ನು ಉಪಯೋಗಿಸಿಕೊಂಡು 15*25 ಅಡಿಯ ಶೆಡ್ಡನ್ನು ಸರ್ವೆ ನಂ 69/3 ರಲ್ಲಿ ರಾತ್ರೋರಾತ್ರಿ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ 69/3 ರಲ್ಲಿ ನನಗೆ ಯಾವುದೇ ಹಕ್ಕು, ಮಾಲೀಕತ್ವ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಪೂರ್ವ ದಿಕ್ಕಿಗೆ ರಂಗಪ್ಪರವರ ಆಸ್ತಿ ಬರುತ್ತದೆ ಎಂದು ಕ್ರಯಪತ್ರದಲ್ಲಿ ಸೇರಿಸಿ ವಾದಿಯ ಆಸ್ತಿ ಸಹ ನನ್ನ ಹೆಸರಿಗೆ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಸರ್ವೆ ನಂ 69/3 ರಲ್ಲಿ ಮಾಡಿದ ಸಾಲಕ್ಕೆ ನಾನು ಹೊಣೆಗಾರನಲ್ಲ. ಗ್ರಾಮೀಣ ಬ್ಯಾಂಕಿನವರು ವಾದಿಯ ಸರ್ವೆ ನಂ 69/3 ರ ಮೇಲಿನ ಹಕ್ಕನ್ನು ಪರಿಶೀಲಿಸಿ ಸಾಲ ಕೊಟ್ಟಿರುತ್ತಾರೆ ಎಂದರೆ ಸುಳ್ಳು, ಸೃಷ್ಟಿ ಮಾಡಿ ಸಾಲ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**